**ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಮುಂಡಗೋಡ.**

ಸಿಸಿ ನಂಃ 16/2025

ಸಿ ಡಬ್ಲುಃ 01

ಪಿ ಡಬ್ಲುಃ 01.

| | |
|---|---|
| ಸಾಕ್ಷಿದಾರರ ಹೆಸರು | ಸುಚಿತ್ರಾ |
| ತಂದೆಯ ಹೆಸರು | ಎಂ.ಆರ್ ನಂಜೇರಾಜನ |
| ವಯಸ್ಸು | 30 ವರ್ಷ |
| ಉದ್ಯೋಗ | ಖಾಸಗಿ ಕೆಲಸ |
| ವಾಸ್ತವ್ಯ | ದೊಡ್ಡೇರಿ ಕಾವಲು, 1 ನೇ ಬ್ಲಾಕ ಮಟ್ಟನವಿಲೆ,<br>ಚೆನ್ನರಾಯಪಟ್ಟಣ ತಾಲೂಕು, ಹಾಸನ ಜಿಲ್ಲೆ. |

ಸಾಕ್ಷಿಯನ್ನು ದಿನಾಂಕ **23.02.2026.** ರಂದು ಕರೆಸಲಾಯಿತು ಮತ್ತು ಪ್ರಮಾಣ ವಚನ ಮಾಡಿಸಲಾಯಿತು.

**(ಮಧ್ಯಾಹ್ನ 12.48 ಗಂಟೆಯಿಂದ ಸಾಕ್ಷ್ಯವನ್ನು ದಾಖಲುಮಾಡಿಕೊಳ್ಳಲು ಪ್ರಾರಂಭ ಮಾಡಿಲಾಯಿತು.)**

**ಮುಖ್ಯ ವಿಚಾರಣೆಃ ಎ ಪಿ ಪಿ ಯವರಿಂದಃ**

ಚಾಸಾ 6 ನನ್ನ ತಂದೆ, ಚಾಸಾ 8 ನನ್ನ ತಾಯಿ, ಚಾಸಾ 9 ನನ್ನ ಅಣ್ಣ , ಚಾಸಾ 10 ನನ್ನ ಚಿಕ್ಕಮ್ಮ ಮತ್ತು ಚಾಸಾ 7 ನಮ್ಮ ಪರಿಚಯದವರು. 2013 ರಲ್ಲಿ ನನಗೆ ಆರೋಪಿಯ ಪರಿಚಯವಾಗಿರುತ್ತದೆ. ನಮ್ಮಿಬ್ಬರ ಮದುವೆಯ ಬಗ್ಗೆ ನಮ್ಮ ಮನೆಯಲ್ಲಿ ಪ್ರಸ್ತಾಪ ಮಾಡಿರುತ್ತಾರೆ. ಆರೋಪಿಯನ್ನು ನಾನು ಮತ್ತು ನಮ್ಮ ಮನೆಯವರು ತುಂಬಾ ನಂಬಿದ್ದೆವು. ಆರೋಪಿಗೆ ಹಣಕಾಸಿನ ಅಡಚಣೆ ಉಂಟಾದಾಗ, ಅವರು ಹಂತ ಹಂತವಾಗಿ ಹಣವನ್ನು ವಾಪಸ್ಸು ಕೊಡುತ್ತೇನೆ ಎಂದು ಹೇಳಿ, ನಮ್ಮಿಂದ ಸುಮಾರು 18,00,000/- ರೂಪಾಯಿಗಳನ್ನು ಹಂತ ಹಂತವಾಗಿ ಪಡೆದುಕೊಂಡಿರುತ್ತಾನೆ. ಭವಿಷ್ಯದಲ್ಲಿ ಆರೋಪಿಯು ನನ್ನ ಗಂಡನಾಗುತ್ತಾನೆ ಎಂಬ ಭಾವನೆಯಲ್ಲಿ ನಾವು ದುಡ್ಡನ್ನು ಕೊಟ್ಟೇವು. ಆರೋಪಿಯು ಸದರಿ ಹಣವನ್ನು ತಾನು ಮನೆ ಕಟ್ಟಬೇಕು ಎಂದು, ಕೃಷಿಗೆ ಬೈಕ್ ಖರೀದಿಸಬೇಕೆಂದು, ಕಾಂಪಿಟೇಟಿವ್ ಎಕ್ಸಾಮ ಬರೆಯಬೇಕೆಂಬ ಮತ್ತು ವರ್ಗಾವಣೆ ಮಾಡಿಕೊಸಿಕೊಳ್ಳಬೇಕೆಂದು ವಿವಿಧ ಕಾರಣಗಳನ್ನು ನೀಡಿ, ನಮ್ಮಿಂದ ದುಡ್ಡನ್ನು ಪಡೆದುಕೊಂಡಿರುತ್ತಾನೆ. ಆರೋಪಿಯು ತಾನು ಮಾಡಿಕೊಂಡ ಸಾಲವನ್ನು ತೀರಿಸಿಬೇಕೆಂದೂ ಸಹಿತ, ನಮ್ಮಿಂದ ಹಣವನ್ನು ಪಡೆದುಕೊಂಡಿರುತ್ತಾನೆ.

ಆರೋಪಿಗೆ ನಾನು ನನ್ನ ಕೆಲಸದಿಂದ ಸಂಪಾದಿಸಿದ ಹಣ, ನನ್ನ ತಂದೆ ಮತ್ತು ತಾಯಿ ಕೃಷಿಯಲ್ಲಿ ತೊಡಗಿಕೊಂಡಿದ್ದು , ಅವರು ಕೃಷಿಯಿಂದ ಸಂಪಾದಿಸಿದ ಹಣ, ನನ್ನ ತಂದೆ ಟ್ರಾಕ್ಟರ್ ನ್ನು ಓಡಿಸಿ ಸಂಪಾದಿಸಿದ ಹಣ, ನನ್ನ ಅಣ್ಣ ಟಾಟಾ ಎ.ಎಸ್ ಓಡಿಸಿ ಸಂಪಾದಿಸಿದ ಹಣ ಮತ್ತು ನನ್ನ ಚಿಕ್ಕಮ್ಮ ಟೇಲರಿಂಗನಿಂದ ಸಂಪಾದಿಸಿದ ಹಣ ಮತ್ತು ಊರಿನಲ್ಲಿ ಸಾಲ ಕೊಡುವವರಿಂದ ಸಾಲವನ್ನು ಪಡೆದುಕೊಂಡು ನಮ್ಮ ಬಳಿ ಇದ್ದ ಎಲ್ಲಾ ಹಣವನ್ನು ಸೇರಿಸಿ, ಆರೋಪಿಗೆ ಹಂತ ಹಂತವಾಗಿ ದುಡ್ಡನ್ನು ಕೊಟ್ಟಿರುತ್ತೇವೆ.

ನಮ್ಮ ತಾಯಿಯ 24.4 ಗ್ರಾಂನ ಹಾಲಮಾರ್ಕ ಇರುವ ಚಿನ್ನದ ಸರವನ್ನು ಕೆನರಾ ಬ್ಯಾಂಕನಲ್ಲಿ ಆರೋಪಿಯೇ ಅವನ ಹೆಸರಿನಲ್ಲಿ ಅಡವಿಟ್ಟು ದುಡ್ಡು ತೆಗೆದುಕೊಂಡಿರುತ್ತಾನೆ. ಈ ಮೇಲೆ ಹೇಳಿದಂತೆ

ಆರೋಪಿಯು ದುಡ್ಡನ್ನು ಪಡೆದುಕೊಳ್ಳುವಾಗ, ತಾನು ನಿಖರವಾದ ಸಮಯಕ್ಕೆ ಅದನ್ನು ಮರುಪಾತಿಸುತ್ತೇನೆಂದು ಅಶ್ವಾಸನೆ ನೀಡಿದ್ದನು, ಆದರೆ ಮರುಪಾವತಿಸುವ ಸಮಯ ಬಂದಾಗ, ಮರುಪಾವತಿಯನ್ನು ಮುಂದೂಡುತ್ತಾ, ನಮಗೆ ಯಾವುದೇ ಹಣವನ್ನು ಮರುಪಾವತಿಸಿದ್ದು ಇರುವುದಿಲ್ಲ.

2021 ನೇ ಸಾಲಿನಲ್ಲಿ 31.2 ಗ್ರಾಂ ಬಂಗಾರವನ್ನು ಅಂದರೇ 24.4 ಗ್ರಾಂನ ಚಿನ್ನದ ಸರವನ್ನು ಒಳಗೊಂಡು, ಅಂದರೇ ಒಂದು ಜೊತೆ ಸ್ಟಡ್ಸ ಮತ್ತು ಒಂದು ಜೊತೆ ಇಯರಿಂಗ್ ಇವುಗಳೆಲ್ಲವನ್ನೂ ಸೇರಿ, ಆರೋಪಿಯ ಹೆಸರಿನಲ್ಲಿ ಅಡವಿಡಲಾಗಿತ್ತು. ಸದರಿ ಎಲ್ಲಾ ಬಂಗಾರದ ಆಭರಣಗಳು ನಮ್ಮ ಕುಟುಂಬಕ್ಕೆ ಸೇರಿದ ಆಭರಣಗಳಾಗಿರುತ್ತವೆ. ಸದರಿ ಸಾಲ ದಿನಾಂಕಃ 22.02.2022 ರಂದು ರಿನಿವಲ್ ಆಗಿರುತ್ತದೆ.

ನಂತರ, ಎಪ್ರೀಲ್-2022 ರಲ್ಲಿ ಅಂದರೇ ಒಂದು ಜೊತೆ ಸ್ಟಡ್ಸ ಮತ್ತು ಒಂದು ರಿಂಗ್ ಇವುಗಳೆಲ್ಲವನ್ನೂ ಸೇರಿ, ನಮಗೆ ಸೇರಿದ ಒಟ್ಟು 15.6 ಗ್ರಾಂನಷ್ಟು ಬಂಗಾರವನ್ನು ಆರೋಪಿ ಹೆಸರಿನಲ್ಲಿ ಅಡವಿಟ್ಟಿದ್ದು, ಆರೋಪಿಯೇ ಹಣವನ್ನು ತೆಗೆದುಕೊಂಡಿರುತ್ತಾನೆ.

ಈ ಮೇಲೆ ಹೇಳಿದಂತೆ ಆರೋಪಿಯು ಎರಡು ಬಾರಿ ಬಂಗಾರದ ಆಭರಣಗಳನ್ನು ನಮ್ಮಿಂದ ತೆಗೆದುಕೊಳ್ಳುವಾಗಲೂ, 6 ತಿಂಗಳ ಒಳಗೆ ಬಿಡಿಸಿಕೊಡುತ್ತೇನೆಂದು ಹೇಳಿದ್ದು, ಆದರೆ ಸಾಲ ಮರುಪಾವತಿಸುವ ಸಮಯ ಬಂದರೂ ಸಹಿತ, ಆರೋಪಿಯು ಮರುಪಾವತಿಗಾಗಿ ದುಡ್ಡನ್ನು ಹೊಂದಿಸಿದ್ದು ಇರುವುದಿಲ್ಲ.

ಮೊದಲನೇ ಬಂಗಾರದ ಸಾಲ ಫೆಬ್ರವರಿ-2023 ರಲ್ಲಿ ರಿನಿವಲ್ ಗೆ ಬಂದಿದ್ದು, 2 ನೇ ಸಾಲ ಎಪ್ರೀಲ್ -2023 ರಲ್ಲಿ ರಿನಿವಲ್ ಗೆ ಬಂದಿತ್ತು.

ಮರುಪಾವತಿಸುವ ಅವಧಿ ಬಂದರೂ ಸಹಿತ, ಆರೋಪಿಯು ದುಡ್ಡನ್ನು ಹೊಂದಿಸಿದ್ದು ಇರುವುದಿಲ್ಲ. 2021 ರಿಂದ 2023 ನೇ ಸಾಲಿನವರೆಗೂ ಆರೋಪಿಯು ದುಡ್ಡನ್ನು ಹೊಂದಿಸದೇ ಇರುವ ಕಾರಣ, ಅವರು ಸಾಲವನ್ನು ಮರುಪಾವತಿಸುತ್ತಾರೆ ಎನ್ನುವ ನಂಬಿಕೆ ನನಗೆ ಹೊರಟು ಹೋಯಿತು. ಅದಕ್ಕಾಗಿ ನಾನು ನಮ್ಮ ಮನೆಯವರ ಹತ್ತಿರ ಸುಮಾರು 1 ಲಕ್ಷ 38 ಸಾವಿರ ಚಿಲ್ಲರೆ ಹಣವನ್ನು ಪಡೆದುಕೊಂಡು, ದಿನಾಂಕಃ 22.02.2023 ರಂದು ದುಡ್ಡನ್ನು ಪಾವತಿಸಿ, 24.4 ಗ್ರಾಂನ ಒಂದು ಚಿನ್ನದ ಸರವನ್ನೂ ಹೊರತುಪಡಿಸಿ, ಎರಡೂ ಬಂಗಾರದ ಖಾತೆಯಲ್ಲಿದ್ದ ಉಳಿದ ಎಲ್ಲಾ ಆಭರಣಗಳನ್ನು ನಾವು ಬಿಡಿಸಿಕೊಂಡೇವು. ನನಗೆ 24,500/- ರೂಪಾಯಿ ಕಡಿಮೆ ಬೆದ್ದಿತ್ತು. ಆರೋಪಿಯು ಈ ಮೇಲೆ 24.4 ಗ್ರಾಂನ ಚಿನ್ನದ ಸರವನ್ನೂ ಬಿಡಿಸಿ ಕೊಡುವುದಾಗಿ ನನಗೆ ಪ್ರಮಾಣ ಮಾಡಿದ್ದರೂ, ಆದರೆ ತನ್ನ ಮಾತಿನಂತೆ ನಡೆದುಕೊಳ್ಳದೇ ಆರೋಪಿಯು ದಿನಾಂಕಃ 13.04.2023 ರಂದು ನನಗೆ ಗೊತ್ತಾಗದಂತೆ ಸದರಿ ಗೋಲ್ಡ ಲೋನ್ ನ್ನು ಎನಹ್ಯಾನ್ಸ ಮಾಡಿ, ಸುಮಾರು 80,000/- ರೂಪಾಯಿಗಳನ್ನು ಪಡೆದುಕೊಂಡಿರುತ್ತಾರೆ.

ಆರೋಪಿಯು ನನಗೆ ದಿನಾಂಕಃ 21.04.2023 ರಂದು ರೂಪಾಯಿ 25,000/-ಗಳನ್ನು ತೆಗೆದುಕೊಂಡು ಬರಲು ತಿಳಿಸಿದ್ದರು. ಆದರೆ ನಾನು ಅಲ್ಲಿಗೆ ತಲುಪಿದ್ದರೂ ಸಹಿತ, ಅವರು ಬಿಡಿಸಿದ್ದು ಇರುವುದಿಲ್ಲ. ಏಕೆ ಸದರಿ ಆಭರಣವನ್ನು ಬಿಡಿಸಿಕೊಳ್ಳಲಾಗುವುದಿಲ್ಲ ಎನ್ನುವ ಬಗ್ಗೆ ನಮ್ಮ ನಡುವೆ ಮಾತುಕತೆ ನಡೆದಾಗ, ಆರೋಪಿ ಸಾಲವನ್ನು ಎನಹ್ಯಾನ್ಸ ಮಾಡಿಕೊಂಡು, ಈ ಮೇಲೆ ಹೇಳಿದಂತೆ 80,000/- ರೂಪಾಯಿಗಳನ್ನು ಪಡೆದುಕೊಂಡ ವಿಷಯ ಸದರಿ ದಿನದಂದು ನನಗೆ ತಿಳಿಯಿತು. ಆರೋಪಿಯು ತಾನು ಹೇಳಿದಂತೆ ದುಡ್ಡನ್ನು ಕೊಡದೇ ಇದ್ದಾಗ ಮತ್ತು ಬಂಗಾರದ ಆಭರಣವನ್ನು ಬಿಡಿಸಿ ಕೊಡದೇ ಇದ್ದಾಗ, ಆರೋಪಿಯು ಸದರಿ ದುಡ್ಡಿನಿಂದ ಏನು ಮಾಡುತ್ತಿದ್ದಾನೆ ಎನ್ನುವ ಸಂಶಯ ನನಗೆ ಬಂದಿರುತ್ತದೆ. ನಾನು ಆರೋಪಿಯ ಮೊಬೈಲ್ ನ್ನು ಚೆಕ್ ಮಾಡಲು ಮುಂದಾದಾಗ, ಆರೋಪಿಯ ಮೊಬೈಲ್ ನ್ನು ಕಸಿದುಕೊಂಡು, ನನ್ನ ಕೈಯನ್ನು ತಿರುವಿ, ಕಿರುಚಾಡಿ, ನನ್ನ ಕತ್ತನ್ನು ಒತ್ತಿ ಹಿಡಿದು ಗೋಡೆಗೆ ತಾಗಿಸಿದನು. ಸದರಿ ಸಮಯಕ್ಕೆ ಮುಂಡಗೋಡಿನಲ್ಲಿರುವ ಆರೋಪಿಗೆ ನೀಡಿದಂತಹ ಪೋಲಿಸ್ ಕ್ವಾಟರ್ಸನಲ್ಲಿ ನಮ್ಮಿಬ್ಬರ ನಡುವೆ ಜಗಳವಾಗಿರುತ್ತದೆ. ಸದರಿ ಸಮಯಕ್ಕೆ ಅಲ್ಲಿನ ಗಾಜುಗಳು ಒಡೆದಿರುತ್ತೇವೆ. ಸದರಿ ಜಗಳದಲ್ಲಿ

ಆರೋಪಿಯು ನನ್ನನ್ನು ಸಾಯಿಸುವುದಾಗಿ ಬೆದರಿಕೆ ಹಾಕಿರುತ್ತಾನೆ. ಸದರಿ ಸಮಯಕ್ಕೆ ಆರೋಪಿಯು ತಾನು ದುಡ್ಡನ್ನು ಕೊಡುವುದಿಲ್ಲ, ಏನು ಮಾಡಿಕೊಳ್ಳುತ್ತೀಯೋ ಮಾಡಿಕೋ, ನಾನು ಪೋಲಿಸ್ ಇದ್ದೇನೆ, ನನಗೆ ನಮ್ಮ ಇಲಾಖೆಯ ಸಂಪೂರ್ಣ ಬೆಂಬಲವಿದೆ ಎಂದು, ನೀನು ಕಾನೂನಾತ್ಮಕವಾಗಿ ಹೋಗುವುದಾದರೇ ಹೋಗು ನಿನಗೆ ಯಾರು ಸಪೋರ್ಟ ಮಾಡುವುದಿಲ್ಲ ಎಂದು ಚಾಲೆಂಜ್ ಮಾಡಿರುತ್ತಾನೆ.

ನಂತರ ನಾನು ಮನೆಗೆ ಹೋಗಿ, ನಮ್ಮ ಮನೆಯವರೊಂದಿಗೆ ಚರ್ಚಿಸಿದ್ದು, ಇಂತಹ ಮೋಸ ಮಾಡುವವರೊಂದಿಗೆ ಮದುವೆ ಮಾಡಿಕೊಳ್ಳುವುದು ಸೂಕ್ತವಲ್ಲವೆಂದು ತೀರ್ಮಾನಿಸಿದೇವು. ಅಲ್ಲಿಗೆ ನಮ್ಮಿಬ್ಬರ ನಡುವೆ ಇದ್ದ ಸಂಬಂಧ ಮುಗಿದಿರುತ್ತದೆ.

ತದನಂತರ, ನನ್ನ ತಂದೆ ತಾಯಿ ಆರೋಪಿಗೆ ಕರೆ ಮಾಡಿ, ಸಾಲ ಕೊಟ್ಟವರು ಮನೆ ಮುಂದೆ ಬಂದು ಗಲಾಟೆ ಮಾಡುತ್ತಿದ್ದಾರೆ, ನಾವು ಕೊಟ್ಟಿರುವ ಹಣವನ್ನು ವಾಪಸ್ಸು ಕೊಡುವಂತೆ ಕೇಳಿದ್ದು, ಆಗ ಆರೋಪಿಯು ತನಗೆ ಸಮಯ ಬೇಕೆಂದು ಕೇಳಿರುತ್ತಾನೆ. ಈ ಮಾತುಕತೆ ಏಪ್ರೀಲ್-2023 ರಲ್ಲಿ ನಡೆದಿರುತ್ತದೆ. ಆದರೆ ಜೂನ್ -2023 ರವರೆಗೂ ಆರೋಪಿಯು ದುಡ್ಡನ್ನು ಕೊಡುತ್ತೇನೆ, ಕೊಡುತ್ತೇನೆ ಎಂದು ಹೇಳಿ ಯಾವುದೇ ದುಡ್ಡನ್ನು ಮರುಪಾವತಿಸಿದ್ದು ಇರುವುದಿಲ್ಲ.

ಜೂನ್ 2023 ರಿಂದ ಮುಂದಿನ ತಿಂಗಳು ಕೊಡುತ್ತೇನೆ ಎಂದು ಹೇಳುತ್ತಾ, ಆರೋಪಿಯ ಸೆಪ್ಟೆಂಬರ್2023 ರವರೆಗೂ ದುಡ್ಡನ್ನು ಕೊಟ್ಟಿದ್ದು ಇರುವುದಿಲ್ಲ. ನನ್ನ ಬಳಿ ಕಾನೂನಾತ್ಮಕವಾಗಿ ಮುಂದುವರೆಯುವುದನ್ನು ಬಿಟ್ಟು ಬೇರೆ ದಾರಿ ಉಳಿದಿಲ್ಲ ಎಂದು ನಾನು ಆರೋಪಿಗೆ ತಿಳಿಸಿ ಹೇಳಿರುತ್ತೇನೆ. ಆರೋಪಿಯು ನಾನು ಕರೆ ಮಾಡಿದರೂ ಸ್ವೀಕರಿಸಿರುವುದಿಲ್ಲ, ಹೇಳಿದ ಸಮಯಕ್ಕೆ ದುಡ್ಡನ್ನು ಕೊಟ್ಟಿದ್ದು ಇರುವುದಿಲ್ಲ ಮತ್ತು ಯಾವುದೇ ರೀತಿ ಪ್ರತಿಕ್ರಿಯೆಸಿದ್ದು ಇರುವುದಿಲ್ಲ.

ಕೊನೆಗೆ ನನಗೆ ಯಾವುದೇ ದಾರಿ ಕಾಣದೇ ಅಕ್ಟೋಬರ್ 13 ರಂದು ನಾನು ಮೇಲ್ ಮೂಲಕ ಕಂಪ್ಲೆಂಟ್ ರೇಜ್ ಮಾಡಿದೆನು. ಆದರೆ ಇಲಾಖೆ ವತಿಯಿಂದ ನನಗೆ ಯಾವುದೇ ಪ್ರತಿಕ್ರಿಯೇ ಬಂದಿರುವುದಿಲ್ಲ. ಆದ ಕಾರಣ, ನಾನು ಮತ್ತೊಮ್ಮೆ ದಿನಾಂಕಃ 12.11.2023 ರಂದು ಮೇಲ್ ಮಾಡಿದೆನು. ಆದರೂ ಸಹಿತ, ಯಾವುದೇ ಪ್ರತಿಕ್ರಿಯೇ ಬರದೇ ಇದ್ದ ಕಾರಣ, ದಿನಾಂಕಃ 17.12.2023 ರಂದು ಇನ್ನೊಮ್ಮೆ ಮೇಲ್ ಮಾಡಿದೆನು. 16 ನೇ ತಾರೀಖಿನ ಒಂದು ನೋಟಿಸ್ಸ , ನಾನು ದಿನಾಂಕಃ 17.12.2023 ರಂದು ಮೇಲ್ ಮಾಡಿದ ನಂತರ ಬಂದಿರುತ್ತದೆ. 26 ನೇ ತಾರೀಖಿನ ಒಳಗೆ ವಿಚಾರಣೆಗೆ ಹಾಜರಾಗುವಂತೆ ಸದರಿ ನೋಟಿಸ್ಸನಲ್ಲಿ ನಮೂದಾಗಿತ್ತು. 25 ನೇ ತಾರೀಖಿಗೆ ನಾನು, ನನ್ನ ತಂದೆ ಮತ್ತು ನನ್ನ ಚಿಕ್ಕಮ್ಮ ಬರುತ್ತೇವೆಂದು ನಾವು ಪೋಲಿಸರಿಗೆ ತಿಳಿಸಿದ್ದೇವು. ಸದರಿ ದಿನಾಂಕದಂದು ನಾವು ಠಾಣೆಗೆ ಹೋದಾಗ, ಆರೋಪಿಯನ್ನು ಬಂದೋಬಸ್ತ ಕರ್ತವ್ಯಕ್ಕೆ ಹಾಕಿದ್ದ ಕಾರಣ, ಅವನು ಠಾಣೆಯಲ್ಲಿ ಇರಲಿಲ್ಲ. ಠಾಣೆಯಲ್ಲಿ ನಾವು ಪಿ.ಐ ರವರ ಸಮಕ್ಷಮ ಎಲ್ಲಾ ವಿಷಯಗಳನ್ನು ವಿವರಿಸಿ, ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿಕೊಳ್ಳುವಂತೆ ಹೇಳಿದ್ದು, ಆದರೆ ಅವರು ಆರೋಪಿಯ ಸಮಕ್ಷಮ ಒಂದು ಬಾರಿ ಮಾತನಾಡೋಣ , ರಾಜಿ ಆಗುತ್ತದೆಯೇ ನೋಡೋಣ ಎಂದು ನಮ್ಮನ್ನು ಮತ್ತೊಮ್ಮೆ ದಿನಾಂಕಃ 31.12.2023 ರಂದು ಬರುವಂತೆ ತಿಳಿಸಿದರು.

ದಿನಾಂಕಃ 31.12.2023 ರಂದು ಸಹಿತ, ಯಾವುದೇ ರಾಜಿಯಾಗಿದ್ದು ಇರುವುದಿಲ್ಲ. ಆರೋಪಿಯ ಪ್ರಸ್ತಾವನೆಗಳಿಗೆ ನಾವು ಒಪ್ಪದೇ ಇದ್ದ ಕಾರಣ, ರಾಜಿಯಾಗಿದ್ದು ಇರುವುದಿಲ್ಲ. ನಮ್ಮನ್ನು ಮತ್ತೆ ದಿನಾಂಕಃ 16.01.2024 ರಂದು ಬರುವಂತೆ ಸೂಚಿಸಿರುತ್ತಾರೆ.

ದಿನಾಂಕಃ 16.01.2024 ರಂದು ಆರೋಪಿಯು ತಾನು ಕೊಡಬೇಕಾದ ಸಂಪೂರ್ಣ ಮೊತ್ತವನ್ನು ತನಗೆ ಇರುವ ಹಣದ ಅಡಚಣೆಯಿಂದಾಗಿ ಕೊಡಲಾಗುವುದಿಲ್ಲ ಎಂದು ವಿನಂತಿಸಿ, ಒಟ್ಟು 10,50,000/- ರೂಪಾಯಿಗಳನ್ನು ಕೊಡಲು ಒಪ್ಪಿಕೊಂಡು, ಅದೇ ದಿನ ಪೋಲಿಸರ ಸಮಕ್ಷಮ ತಾನೇ ಸಹಿ ಮಾಡಿ, ಎರಡೂ ಚೆಕ್ ಗಳನ್ನು ಅಂದರೇ,

ದಿನಾಂಕಃ 20.05.2024 ರ ಮತ್ತು  ದಿನಾಂಕಃ 20.09.2024 ರ ಇನ್ನೊಂದು, ತಲಾ 5,25,000/- ರೂಪಾಯಿಗಳ ಪೋಸ್ಟ ಡೇಟೆಡ್  ಎರಡು ಚೆಕ್ ಗಳನ್ನು ತನ್ನ ಹಸ್ತಾಕ್ಷರದಲ್ಲಿ ಬರೆದು, ಪೋಲಿಸರ ಸಮಕ್ಷಮ ನಮಗೆ ಕೊಟ್ಟರು.

**(ಈ ಹಂತದಲ್ಲಿ  ಮಧ್ಯಾಹ್ನ 2.00 ಗಂಟೆ ಆದ ಕಾರಣ, ಮುಂದುವರೆದ ಮುಖ್ಯ ವಿಚಾರಣೆಯನ್ನು ಅಪರಾಹ್ನ 2.45 ಗಂಟೆಗೆ  ತೆಗೆದುಕೊಳ್ಳಲು ಪ್ರಕರಣವನ್ನು ಎತ್ತಿಡಲಾಯಿತು. )**

**(ಮಧ್ಯಾಹ್ನ 3.12 ಗಂಟೆಯಿಂದ  ಸಾಕ್ಷ್ಯವನ್ನು  ದಾಖಲುಮಾಡಿಕೊಳ್ಳಲು  ಪ್ರಾರಂಭ ಮಾಡಿದ್ದು,  ಅದು ಸಂಪೂರ್ಣಗೊಂಡಾಗ ಮಧ್ಯಾಹ್ನ 3.52 ಗಂಟೆಯಾಗಿರುತ್ತದೆ.  )**

ಈ ರೀತಿ  10,50,000/- ರೂಪಾಯಿಗಳಿಗೆ  ರಾಜಿಯಾದ ಬಗ್ಗೆ ಪಿ.ಐ ರವರು  ಆರೋಪಿಯ ಅಣ್ಣ ಚಾಸಾ 11 ಚಂದ್ರಶೇಖರ ಮತ್ತು ಅವರೊಂದಿಗೆ ಬಂದಿದ್ದ 4 ಜನರ  ಹೇಳಿಕೆಯನ್ನು ದಾಖಲಿಸಿಕೊಂಡು, ರಾಜಿಯಾದ ನಂತರ, ನಮಗೆ  ಹಿಂಬರಹವೂ ಸಹ ಕೊಟ್ಟಿರುತ್ತಾರೆ.

ದಿನಾಂಕಃ 20.05.2024 ರ ದಿನಾಂಕದ ಚೆಕ್ ನ್ನು ನಗದೀಕರಣಕ್ಕಾಗಿ ಹಾಜರುಪಡಿಸಿರುವ  ಹಿಂದಿನ ನಾವು ಠಾಣೆಗೆ  ಮೇಲ್ ಮಾಡಿ,  ನಾವು ಚೆಕ್ ನ್ನು ನಾಳೆ ಹಾಜರುಪಡಿಸುತ್ತಿದ್ದೇವೆ, ಆರೋಪಿಗೆ ಖಾತೆಯಲ್ಲಿ ಸಾಕಷ್ಟು ಹಣವನ್ನು  ಇಡಲು ಹೇಳುವಂತೆ ತಿಳಿಸಿರುತ್ತೇವೆ. ಸದರಿ ಚೆಕ್ ನ್ನು ನಾವು ಹಾಜರುಪಡಿಸಿದ್ದು, ಆದರೆ  ಖಾತೆಯಲ್ಲಿ ಮಾನ್ಯ ಮಾಡುವಷ್ಟು  ಹಣ ಇಲ್ಲವೆಂದು  ಅಮಾನ್ಯಗೊಂಡಿರುತ್ತದೆ.  ನಂತರ, ಆರೋಪಿ ಮತ್ತು ಅವರ ಅಣ್ಣ ನಮಗೆ ಮೆಸೇಜ್ ಮಾಡಿ ಅವರಿಗೆ 15-20 ದಿನಗಳ ಕಾಲಾವಕಾಶವನ್ನು ಕೊಡುವಂತೆ ಕೋರಿದ್ದು, ಆ ಪ್ರಕಾರ  ನಾವು ಅವರಿಗೆ ಕಾಲಾವಕಾಶ ಕೊಟ್ಟೇವು. ತದನಂತರ, ದಿನಾಂಕಃ 18.06.2024 ರಂದು ನಾವು ಇನ್ನೊಮ್ಮೆ ಸದರಿ ಚೆಕ್ ನ್ನು ನಗದೀಕರಣಕ್ಕಾಗಿ  ಅವರಿಗೆ ತಿಳಿಸಿಯೇ ಹಾಜರುಪಡಿಸಿರುತ್ತೇವೆ. ಆದರೆ ಎರಡನೇ ಬಾರಿಯು ಚೆಕ್ ಅಮಾನ್ಯಗೊಂಡಿರುತ್ತದೆ. ತದನಂತರ, ಆರೋಪಿಯು ನಮಗೆ  ಹಾರಿಕೆ ಉತ್ತರಗಳನ್ನು ಕೊಡಲು ಪ್ರಾರಂಭಿಸಿದನು. ಈ ಮೇಲೆ ಹೇಳಿದ  ವಿಷಯವನ್ನು ನಾವು ಪೋಲಿಸರಿಗೆ ತಿಳಿಸಿದ್ದು, ಪೋಲಿಸರು ದೂರನ್ನು ದಾಖಲಿಸುವಂತೆ  ಸೂಚಿಸಿದ ಪ್ರಕಾರ, ನಾನು ದಿನಾಂಕಃ 23.06.2024 ರಂದು ದೂರನ್ನು ದಾಖಲಿಸಿರುತ್ತೇನೆ.

ದೂರು ಕೊಡುವ ದಿನ ನಾನೇ ಸ್ವತಃ ದೂರನ್ನು ತಯಾರಿಸಿಕೊಂಡು ಬಂದಿದ್ದೆನು, ಆದರೆ ಠಾಣೆಯಲ್ಲಿ ಪೋಲಿಸರು  ನಾನು ತಯಾರಿಸಿಕೊಂಡ ಬಂದ ದೂರು ತುಂಬಾ ಲೆಂತಿ ಇದೆ  ಎಂದು  ಹೇಳಿ, ಅದನ್ನು ಎಡಿಟ್ ಮಾಡಿದರು.  ನಾನು ಪೋಲಿಸರ ಮುಂದೆ ಎಲ್ಲಾ ಸಂಗತಿಗಳನ್ನು  ಸವಿಸ್ತಾರವಾಗಿ  ವಿವರಿಸಿದ್ದರೂ ಸಹಿತ, ಪೋಲಿಸರು ಪ್ರಥಮ ವರ್ತಮಾನ  ವರದಿಯ ಪ್ರಕರಣದ ಸಾರಾಂಶದ ಕಾಲಂನಲ್ಲಿ  ಗೋಲ್ಡ  ಚೈನನ ಬಗ್ಗೆ ನಮೂದು  ಮಾಡಿದ್ದು ಇರುವುದಿಲ್ಲ.  ಆಗ ಬಗ್ಗೆ ನಾನು ಪೋಲಿಸರಿಗೆ ಕೇಳಿದಾಗ,  ನನ್ನ ಹೇಳಿಕೆಯಲ್ಲಿ ವಿವರವಾಗಿರುವ ಕಾರಣ,  ನಡೆಯುತ್ತದೆ ಎಂದು  ಮತ್ತು ನನ್ನ ಗೋಲ್ಡ ನನಗೆ ಸಿಗುತ್ತದೆ ಎಂದು ತಿಳಿಸಿದರು.

ನ್ಯಾಯಾಲಯದ ಮುಂದಿರುವ ದೂರನ್ನು  ನೋಡುತ್ತಿದ್ದು  ಅದನ್ನು ಗುರುತಿಸುತ್ತೇನೆ,  ಅದನ್ನು **ನಿಪಿ.  1** ಎಂದು, ಹಾಗೂ ಅದರಲ್ಲಿರುವ  ಸಹಿ ನನ್ನದೇ ಆಗಿದ್ದು, ನನ್ನ ಸಹಿಯನ್ನು **ನಿಪಿ. 1 ಎ** ಎಂದು ಗುರುತಿಸಲಾಯಿತು.

ನ್ಯಾಯಾಲಯದ ಮುಂದಿರುವ ಪ್ರಥಮ ವರ್ತಮಾನ  ವರದಿಯನ್ನು  ನೋಡುತ್ತಿದ್ದು  ಅದನ್ನು ಗುರುತಿಸುತ್ತೇನೆ,  ಅದನ್ನು **ನಿಪಿ.2** ಎಂದು, ಹಾಗೂ ಅದರಲ್ಲಿರುವ  ಸಹಿ ನನ್ನದೇ ಆಗಿದ್ದು, ನನ್ನ ಸಹಿಯನ್ನು **ನಿಪಿ. 2 ಎ** ಎಂದು ಗುರುತಿಸಲಾಯಿತು.

ನಂತರ  ದಿನಾಂಕಃ 24.06.2024 ರಂದು ಆರೋಪಿಗೆ ನೀಡಿದ್ದ ಕ್ವಾಟರ್ಸನಲ್ಲಿ, ನಾನು ದಿನಾಂಕಃ 28.04.2021 ರಂದು  ಆರೋಪಿಗೆ  2,50,000/- ರೂಪಾಯಿಯನ್ನು ನಗದು ರೂಪದಲ್ಲಿ  ಕೊಟ್ಟಿದ್ದರ ಹಿನ್ನಲೆಯಲ್ಲಿ  ಸ್ಥಳ  ಪರಿಶೀಲನೆ

ಮಾಡಿ ಪೋಲಿಸರು, ಚಾಸಾ 2 ಮತ್ತು 3 ರವರ ಸಮಕ್ಷಮ ಬೆಳಿಗ್ಗೆ 11.30 ಗಂಟೆಯಿಂದ 12.30 ಗಂಟೆಯವರೆಗೆ ಪಂಚನಾಮೆಯನ್ನು ಜರುಗಿಸಿದರು. ನಾನು ಆರೋಪಿಯ ಬಳಿ ಗೋಲ್ಡ ಕೇಳಲು ಹೋದಾಗ, ನಮ್ಮ ಮಧ್ಯ ಜಗಳವಾಗಿದ್ದ ಬಗ್ಗೆ ಮತ್ತು ಆರೋಪಿ ನನ್ನ ಮೇಲೆ ಹಲ್ಲೆ ಮಾಡಿದ್ದರ ಬಗ್ಗೆ ನಾನು ಪೋಲಿಸರಿಗೆ ತಿಳಿಸಿ, ಸದರಿ ಜಾಗವನ್ನು ಪಂಚನಾಮೆಯ ದಿನ ಅವರಿಗೆ ತೋರಿಸಿದ್ದರೂ ಸಹಿತ, ಅದನ್ನು ಪಂಚನಾಮೆಯಲ್ಲಿ ಪೋಲಿಸರು ನಮೂದು ಮಾಡಿದ್ದು ಇರುವುದಿಲ್ಲ, ದುಡ್ಡಿನ ಬಗ್ಗೆ ಮಾತ್ರ ನಮೂದು ಮಾಡಿರುತ್ತಾರೆ .

ಪಂಚನಾಮೆ ಮಾಡುವ ಕಾಲಕ್ಕೆ ಪೋಲಿಸರು ಛಾಯಾ ಚಿತ್ರವನ್ನೂ ಸಹ ತೆಗೆದುಕೊಂಡರು. ಪಂಚನಾಮೆಯನ್ನು ಪ್ರಿಂಟ್ ತೆಗೆದು, ಸಹಿಯನ್ನು ಪಡೆದುಕೊಂಡರು. ಸಾಕ್ಷಿಯು ಘಟನಾ ಸ್ಥಳದ ಪಂಚನಾಮೆಯನ್ನು ಮತ್ತು ಅದರ ಪ್ರತಿ ಪುಟದಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಪಂಚನಾಮೆಯನ್ನು **ನಿಪಿ.3** ಎಂದು, ಸಾಕ್ಷಿಯ ಸಹಿಗಳನ್ನು ಅನುಕ್ರಮವಾಗಿ **ನಿಪಿ. 3 ಎ ಯಿಂದ ನಿಪಿ.3 ಡಿ** ಎಂದು ಗುರುತಿಸಲಾಯಿತು. ಸಾಕ್ಷಿಯು ಪಂಚನಾಮೆ ಮಾಡುವ ಕಾಲಕ್ಕೆ ತೆಗೆದ ಛಾಯಾ ಚಿತ್ರಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಅನುಕ್ರಮವಾಗಿ ಭಾ.ಸಾ.ಅ.ನಿ. ಕಲಂ 65 ಬಿ ಪ್ರಮಾಣ ಪತ್ರ ಮತ್ತು ಸಿ.ಡಿ ಗೆ ಒಳಪಟ್ಟು **ನಿಪಿ.4 ಮತ್ತು ನಿಪಿ.5** ಎಂದು, ಗುರುತಿಸಲಾಯಿತು. ಸಾಕ್ಷಿಯು ನಿಪಿ.4 ನ್ನು ನೋಡಿ, ಅದರಲ್ಲಿ ಕಾಣುವ ಕಪಾಟಿನ ಗಾಜೆ ಆ ದಿನ ಒಡೆದಿದ್ದಾಗಿ ನುಡಿಯುತ್ತಾರೆ.

ದಿನಾಂಕಃ 30.08.2024 ರಂದು ನನ್ನ ಸ್ಟೇಟ ಬ್ಯಾಂಕ್ ಆಫ ಇಂಡಿಯಾ ಮತ್ತು ಕರ್ನಾಟಕ ಬ್ಯಾಂಕ್ ನ ಖಾತೆಯ ತಖ್ತೆ , ಫೋನ್ ಪೇ ಮತ್ತು ಗೂಗಲ್ ಪೇ ಟ್ರಾಂಸ್ರಾಕ್ಷನ್ ಪ್ರತಿಗಳು, ನನ್ನ ತಾಯಿ ಮತ್ತು ಚಿಕ್ಕಮ್ಮ ಬ್ಯಾಂಕಿನಲ್ಲಿ ಮತ್ತು ಧರ್ಮಸ್ಥಳ ಸಂಘದಲ್ಲಿ ಆರೋಪಿಗೆ ಕೊಡಲೆಂದು ತೆಗೆದುಕೊಂಡಿದ್ದ ಸಾಲದ ವ್ಯವಹಾರಗಳಿಗೆ ಸಂಬಂಧಿಸಿದ ಪಾಸ್ ಬುಕ್ ನ 6 ಪ್ರತಿಗಳು, ಬ್ಯಾಂಕ ಹಿಂಬರಹದ 3 ಪ್ರತಿಗಳು, ಅಮಾನ್ಯಗೊಂಡ ಚೆಕ್ ಮತ್ತು ನಮ್ಮ ಬಳಿ ಇದ್ದ ಇನ್ನೊಂದು ಪೋಸ್ಟ ಡೇಟೆಡ್ ಚೆಕ್ ನ್ನು ಚಾಸಾ 4 ಮತ್ತು 5 ರವರ ಪರಿಶೀಲಿಸಿದರು. ಸದರಿ ಎಲ್ಲಾ ದಾಖಲಾತಿಗಳನ್ನು ಜಪ್ತುಪಡಿಸಿಕೊಂಡು, ಸೀಲ್ ಮಾಡಿದರು. ಅದೇ ದಿನ ವಾಟ್ಸಾಪ್ ಮತ್ತು ವೈಸ್ ರೇಕಾರ್ಡಿಂಗ್ಸ ನ್ನು ಕೊಡಲು ಹೋದಾಗ, ಪ್ರಕರಣ ರಾಜಿಯಾಗಬಹುದು ಎಂದು ಮತ್ತು ಅವಶ್ಯಕತೆ ಇದ್ದಲ್ಲಿ ಅವುಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬಹುದೆಂದು, ಪೋಲಿಸರು ಅವುಗಳನ್ನು ತೆಗೆದುಕೊಂಡಿದ್ದು ಇರುವುದಿಲ್ಲ. ಮಹಜರ್ ನ್ನು ಜರುಗಿಸಿ, ನನ್ನ ಸಹಿ ಪಡೆದುಕೊಂಡರು. ಸದರಿ ಸಮಯಕ್ಕೆ ಛಾಯಾ ಚಿತ್ರಗಳನ್ನೂ ಸಹ ತೆಗೆದುಕೊಂಡರು. ಸದರಿ ಸಮಯಕ್ಕೆ ನಾನು ಯಾವ ಯಾವ ದಾಖಲಾತಿಗಳನ್ನು ಕೊಡುತ್ತಿದ್ದೇನೆ ಎನ್ನುವದರ ಬಗ್ಗೆ ವಿಡಿಯೋ ಸಹ ಮಾಡಿಕೊಂಡರು.

ನ್ಯಾಯಾಲಯದ ಮುಂದಿರುವ **ದಾಖಲಾತಿಗಳ ಜಪ್ತುಪಂಚಚನಾಮೆಯನ್ನು** ನೋಡುತ್ತಿದ್ದು ಅದನ್ನು ಗುರುತಿಸುತ್ತೇನೆ, ಅದನ್ನು **ನಿಪಿ.6** ಎಂದು, ಹಾಗೂ ಅದರಲ್ಲಿರುವ ಸಹಿ ನನ್ನದೇ ಆಗಿದ್ದು, ನನ್ನ ಸಹಿಯನ್ನು **ನಿಪಿ.6 ಎ** ಎಂದು ಗುರುತಿಸಲಾಯಿತು. ಸದರಿ ಸಮಯಕ್ಕೆ ತೆಗೆದ ಛಾಯಾ ಚಿತ್ರಗಳನ್ನು ನೋಡಿ ಗುರುತಿಸುತ್ತೇನೆ, ಸದರಿ ಛಾಯಾ ಚಿತ್ರಗಳನ್ನು ಭಾ.ಸಾ.ಅ.ನಿ. ಕಲಂ 65 ಬಿ ಪ್ರಮಾಣ ಪತ್ರ ಮತ್ತು ಸಿ.ಡಿ ಗೆ ಒಳಪಟ್ಟು **ನಿಪಿ. 7 ರಿಂದ ನಿಪಿ.10** ಎಂದು ಗುರುತಿಸಲಾಯಿತು. ಸದರಿ ದಿನ ನಾನು 24.4 ಗ್ರಾಂನ ಬಂಗಾರದ ಸರದ ಬಗ್ಗೆ ಪೋಲಿಸರಿಗೆ ಕೇಳಿದಾಗ, ಅದು ನನಗೆ ಸಿಗುತ್ತದೆ ಎಂದು ಹೇಳಿರುತ್ತಾರೆ. ಪೋಲಿಸರು ಇಲ್ಲಿಯ ತನಕವೂ ಹೀಗೆ ಹೇಳಿರುತ್ತಾರೆ, ಆದರೆ ಇಲ್ಲಿಯವರೆಗೂ ನನಗೆ ಬಂಗಾರದ ಸರ ಸಿಕ್ಕಿದ್ದು ಇರುವುದಿಲ್ಲ.

**(ಈ ಹಂತದಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರು ಮುಂದುವರೆದ ಮುಖ್ಯ ವಿಚಾರಣೆಗೆ ಸಮಯವಕಾಶ ಕೋರಿದ್ದು ಸಮಯವಕಾಶ ನೀಡಲಾಯಿತು )**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)**

ಓ ಹೆ ಕೇ  ಸರಿ ಇದೆ.

Sd/-

**ಸಿವಿಲ್ ಜಡ್ಜ, ಮುಂಡಗೋಡ.**